# ಉದ್ದೇಶವೇ ಪ್ರಧಾನ

ಜೆ. ಶಶಿಧರ್

ಜನಜೀವನದಲ್ಲಿ ಎಲ್ಲರೂ ಒಂದಲ್ಲ ಒಂದು ಉದ್ದೇಶವನ್ನು ಇಟ್ಟುಕೊಂಡೇ ಕಾರ್ಯಪ್ರವೃತ್ತರಾಗುತ್ತಾರೆ. ಆದ್ದರಿಂದ ನಮ್ಮ ಉದ್ದೇಶ ಏನು ಎಂಬುದೇ ಎಲ್ಲ ಒಳಿತು, ಕೆಡುಕು, ಜಯ-ಸೋಲು, ಕೀರ್ತಿ-ಅಪಕೀರ್ತಿಗಳನ್ನು ನಿರ್ಣಯಿಸುತ್ತವೆ. ಆದ್ದರಿಂದ ಕೆಲಸ ಮಾಡುವ ಮುನ್ನ ಉದ್ದೇಶ ಎಂತಹುದು ಎಂದು ತಿಳಿದಿರುವುದು ಮುಖ್ಯ . ಈ ಕುರಿತು ವಿವೇಚಿಸುವ ಲೇಖಕರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.

ಈ ಜಗತ್ತಿನಲ್ಲಿ ಪ್ರತಿಯೊಂದು ಜೀವರಾಶಿಯೂ ಯಾವುದೋ ಒಂದು ಉದ್ದೇಶದಿಂದ ಜನ್ಮ ತಾಳಿರುತ್ತದೆ. ಅದರಲ್ಲಿ ಮಾನವ ಜನ್ಮ ಅತ್ಯಂತ ಶ್ರೇಷ್ಠವಾದದ್ದು ಎಂಬುದು ಋಷಿವಾಕ್ಯ. ಏಕೆಂದರೆ ಈ ಪವಿತ್ರವಾದ ಮಾನವ ಜನ್ಮದ ಉದ್ದೇಶವೇ ಭಗವಂತನ ಸಾಕ್ಷಾತ್ಕಾರ. ಆದರೆ ಮಾನವನ ಬುದ್ಧಿ ವಿಕಾಸವಾದಂತೆಲ್ಲಾ ಪ್ರತಿಯೊಬ್ಬರ ಜೀವನದ ಉದ್ದೇಶಗಳೂ ಬೇರೆಯಾಗುತ್ತ ಹೋಗುತ್ತವೆ. ಅದು ಲೌಕಿಕ ಪ್ರಗತಿಯೇ ಆಗಲಿ ಅಥವ ಆಧ್ಯಾತ್ಮಿಕ ಪ್ರಗತಿಯೇ ಆಗಲಿ, ಅದು ಉದ್ದೇಶವನ್ನೇ ಅವಲಂಬಿಸಿದೆ. ಸಾಮಾನ್ಯವಾಗಿ ಎಲ್ಲರೂ ತಿಳಿದಿರುವಂತೆ ಮತ್ತು ಎಲ್ಲರ ಕಣ್ಣಿಗೂ ಗೋಚರಿಸುವ ಲೌಕಿಕ ಅಭಿವೃದ್ಧಿಯ ಉದ್ದೇಶವೇ ಮುಖ್ಯವಾಗಿ, ಎಲ್ಲರೂ ಅದೇ ಉದ್ದೇಶದಿಂದ ಕರ್ಮ ಮಾಡುವುದು ವಾಡಿಕೆ. ಯಾರೇ ಆಗಲಿ ಲೌಕಿಕ ಆಸೆಗಳನ್ನು ಧರ್ಮದ ಚೌಕಟ್ಟಿನಲ್ಲಿ ಅನುಭವಿಸಲು ಪೂಜೆ, ಹೋಮ, ವ್ರತ ಮುಂತಾದ ಕ್ರಿಯೆಗಳನ್ನು ಒಂದು ನಿರ್ದಿಷ್ಟ ಉದ್ದೇಶದಿಂದ ಮಾಡುವುದು ಶಾಸ್ತ್ರಸಮ್ಮತ. ಆದರೆ ಇದಕ್ಕೆ ವಿರುದ್ಧವಾಗಿ ಇತರರಿಗೆ ತೊಂದರೆ ಕೊಡಲು ಮಾಟ, ಮಂತ್ರ ಇವುಗಳ ಆಶ್ರಯ ಪಡೆದು ತಮ್ಮ ದುರುದ್ದೇಶವನ್ನು ತೀರಿಸಿಕೊಳ್ಳುವ ಕ್ರಮವೂ ಇದೆ. ಆದರೆ ಯಾರೇ ಆಗಲಿ, ಯಾವ ಉದ್ದೇಶದಿಂದ ಕರ್ಮ ಮಾಡುತ್ತಾನೋ ಅದಕ್ಕೆ ತಕ್ಕಂತೆ ಫಲ. ಸಾಮಾನ್ಯವಾಗಿ ಒಳ್ಳೆಯ ವಿದ್ಯಾಭ್ಯಾಸ, ನೌಕರಿ, ಮದುವೆ, ಮಕ್ಕಳು, ಆಸ್ತಿ ಇವುಗಳನ್ನು ಪಡೆಯಲು ಒಂದಲ್ಲ ಒಂದು ನಿರ್ದಿಷ್ಟ ಪೂಜೆ, ವ್ರತ, ಹೋಮ ಸಹಕಾರಿಯಾಗುತ್ತವೆ.

ಆದರೆ ಎಲ್ಲವನ್ನೂ ತ್ಯಾಗ ಮಾಡಿದವರ ಉದ್ದೇಶ ಮಾತ್ರ ಭಗವಂತನ ಸಾಕ್ಷಾತ್ಕಾರ. ಯಾವುದೇ ಕೆಲಸ ಮಾಡಲಿ ಅದರ ಫಲವನ್ನು ಭಗವಂತನಿಗೆ ಅರ್ಪಿಸಿ, ನಿರಾಳವಾದ ಮನಸ್ಸಿನಿಂದ ಭಗವಂತನೇ ಬೇಕೆಂಬ ಉದ್ದೇಶದಿಂದ ಯಾರು ಇರುತ್ತಾರೋ ಅವರಿಗೆ ಒಂದಲ್ಲ ಒಂದು ಶುಭದಿನ ಆ ಉದ್ದೇಶ ಈಡೇರುವುದು ಖಂಡಿತ.

ಸಾಮಾನ್ಯವಾಗಿ ಎಲ್ಲರೂ ತಿಳಿದಿರುವಂತೆ ಪ್ರತಿಯೊಬ್ಬರೂ ಒಳ್ಳೆಯ ಉದ್ದೇಶದಿಂದಲೇ ಮದುವೆಯಾಗುವುದು, ಮಕ್ಕಳನ್ನು ಪಡೆದು ಅವರಿಂದ ಒಳಿತಾಗಲೆಂದು ಆಶಿಸುವುದು. ಆದರೆ ಅದೇ ಮಕ್ಕಳು ತಮ್ಮ ಪೂರ್ವಜನ್ಮದ ಪ್ರಾರಬ್ಧದಿಂದಲೋ, ಕೆಟ್ಟವರ ಸಹವಾಸದಿಂದಲೋ ಅಡ್ಡದಾರಿ ಹಿಡಿದು ಸಮಾಜಕ್ಕೆ ಕಂಟಕರಾಗುತ್ತಾರೆ. ಇಂದು 'ಅವಿದ್ಯಾವಂತ ಒಂದು ಮೂಟೆ ರಾಗಿ ಕದ್ದರೆ ವಿದ್ಯಾವಂತ ಒಂದು ಲಾರಿ ರಾಗಿ ಕದ್ದ' ಎಂಬ ಮಾತು ಜನಜನಿತ. ವಿದ್ಯಾಭ್ಯಾಸ ಪಡೆಯುವ ಉದ್ದೇಶವೇ ಇಂದು ಜನರನ್ನು ಯಾವ ರೀತಿ ಮೋಸ ಮಾಡುವುದು - ಎಂಬ ಮನೋಭಾವ ಹೆಚ್ಚಾಗುತ್ತಿದೆ. ದೇಶವನ್ನು ಆಳುವ ರಾಜಕಾರಣಿಗಳು ತಾವು ಯಾವ ಉದ್ದೇಶದಿಂದ ರಾಜ್ಯ ಆಳುತ್ತಿದ್ದಾರೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳುವ ಸ್ಥಿತಿ ಬಂದಿದೆ. ಸಾರ್ವಜನಿಕರು ಜನನಾಯಕರನ್ನು ಆಯ್ಕೆ ಮಾಡುವಾಗ ದೇಶದ ಹಿತಾಸಕ್ತಿಯ ಉದ್ದೇಶದಿಂದ ಆಯ್ಕೆ ಮಾಡಬೇಕು.

ಯಾವುದೇ ಕ್ಷೇತ್ರದಲ್ಲಾಗಲಿ ನಾವು ಒಂದು ನಿರ್ದಿಷ್ಟ ಗುರಿ ತಲುಪಿ, ನಮ್ಮ ಜೀವನ ಪಾವನವಾಗಲು ಉದ್ದೇಶ ಬಹು ಮುಖ್ಯ. ಕೆಲವೊಮ್ಮೆ ನಮ್ಮ ಉದ್ದೇಶದಂತೆ ಫಲ ದೊರಕದೆ ಇರಬಹುದು. ಕಾರಣ ನಾವು ನಮ್ಮ ಗುರುಹಿರಿಯರ ಮಾತಿನಂತೆ ಪ್ರಯತ್ನಶೀಲರಾಗದೆ ಇರುವುದು. ಉದಾಹರಣೆಗೆ ಎಲ್ಲರಿಗೂ ರುಚಿಯಾದ ಅಡುಗೆ ಮಾಡಿ ಎಲ್ಲರನ್ನೂ ತೃಪ್ತಿಪಡಿಸಬೇಕೆಂಬ ಉದ್ದೇಶದಿಂದ ಅಡುಗೆ ಮಾಡುವಾಗ ಅದಕ್ಕೆ ಬೇಕಾದ ಸಾಮಗ್ರಿಗಳು, ಮಾಡುವ ವಿಧಾನ, ವ್ಯತ್ಯಾಸವಾಗಿ ನಮ್ಮ ಉದ್ದೇಶ ಪೂರ್ಣವಾಗದೆ ಹೋಗಬಹುದು. ಇದನ್ನು ಅರಿತ ಗುರುಹಿರಿಯರು ನಮ್ಮ ಉದ್ದೇಶ ಒಳ್ಳೆಯದಾಗಿರುವುದರಿಂದ ನಮಗೆ ಸಕಾಲದಲ್ಲಿ ಬೇಕಾದ ಸಹಾಯ ಒದಗಿಸಿ, ನಮ್ಮ ಉದ್ದೇಶ ಪೂರ್ಣಗೊಳ್ಳಲು ಸಹಕಾರಿಯಾಗುತ್ತಾರೆ.

ಆದರೆ ನಮ್ಮ ಉದ್ದೇಶವೇ ಸರಿಯಿಲ್ಲದೆ ಎಲ್ಲಾ ವ್ಯವಸ್ಥೆ ಇದ್ದರೂ ಆ ಕರ್ಮದಿಂದ ತನಗೂ ಇತರರಿಗೂ ತೊಂದರೆ ಉಂಟಾಗಿ, ಅದರ ಫಲವಾಗಿ ದುಷ್ಪರಿಣಾಮಗಳನ್ನು ಅನುಭವಿಸಲೇ ಬೇಕಾಗುವುದು. ❋